ಎಂ.ವಿ.ಸಿ. ನಂಃ 2416/2024
ಆರ್.ಡಬ್ಲ್ಯೂ-2 (ದವಲತರಾವ್)

ದಿನಾಂಕ: 20-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ ಶ್ರೀ.ಎ.ಕೆ.ಎ. ಅರ್ಜಿದಾರ ಪರ ವಕೀಲರಿಂದಃ</u>**

ನನ್ನ ಸ್ವಂತ ಊರು ಮಿರಜ. ನನ್ನ ತಕರಾರಿಗೆ ಹಾಗೂ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ನನಗೆ ಮೃತ ನಿಯಾಜ ಇವರ ಪರಿಚಯ ಇರುವುದಿಲ್ಲ. ಆದರೆ ಅವರು ಕೂಲಿ ಕೆಲಸಕ್ಕೆ ಬಂದಿದ್ದರು. ಮಿರಜನಿಂದ 04ಕಿ.ಮೀ ಅಂತರದಲ್ಲಿ ಸುಭಾಸನಗರದಲ್ಲಿ ನನ್ನ ಮನೆಯ ಕೆಲಸಕ್ಕೆ ಕೂಲಿಯಾಗಿ ನಿಯಾಜ ಬಂದಿದ್ದರು. ನಾನು ಲೇಬರ್ ಕಾಂಟ್ರ್ಯಾಕ್ಟರ್ ಇದ್ದೇನೆ.

2. ಮೋಟರ ಸೈಕಲ ನಂ.MH-10/MF-1374ಕ್ಕೆ ನಾನೇ ಮಾಲೀಕನಿರುತ್ತೇನೆ. ಸದರಿ ಮೋಟರ ಸೈಕಲ 15 ವರ್ಷ ಮೇಲಾಗಿದ್ದರಿಂದ ನಾನು ಅದನ್ನು ಉಪಯೋಗಿಸದೆ ನನ್ನ ಮನೆಯ ಮುಂದೆ ನಿಲ್ಲಿಸಿದ್ದೆ ಆದರೆ ಅದು ಚಾಲನೆ ಮಾಡುವ ಪರಿಸ್ಥಿತಿಯಲ್ಲಿ ಇತ್ತು. ಸದರಿ ಮೋಟರ ಸೈಕಲನ್ನು ನಾನು ಈಗಲೂ ಸಹ ಉಪಯೋಗಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮೋಟರ ಸೈಕಲಗೆ ಪೆಟ್ರೋಲ್ ಹಾಕಿಸಿ ಇಟ್ಟಿದ್ದೆ ಎಂದರೆ ಸರಿಯಲ್ಲ.

3. ನನ್ನ ಮನೆ ಮುಂದೆ ನಿಲ್ಲಿಸಿದ ಮೋಟರ ಸೈಕಲ ನಂ.MH-10/MF-1374 ಕಾಣಿಸದೇ ಇದ್ದುದ್ದರಿಂದ ಅದನ್ನು ನಾನು ಹುಡುಕಿರುತ್ತೇನೆ. ಸಿಗದೇ ಇದ್ದುದ್ದರಿಂದ ಮಿರಜ ಗ್ರಾಮೀಣ ಪೊಲೀಸ ಠಾಣೆಯಲ್ಲಿ ಅರ್ಜಿ ಕೊಟ್ಟಿದ್ದೆ. ಸದರಿ

ಅರ್ಜಿಯ ಪ್ರತಿಯನ್ನು ನಾನು ಹಾಜರ ಮಾಡಿಲ್ಲ. ಅದನ್ನು ಹಾಜರಪಡಿಸಲು ತೊಂದರೆ ಇರುವುದಿಲ್ಲ. ನಾನು ನನ್ನ ಮೋಟರ ಸೈಕಲ ಕಾಣೆಯಾದ ದಿನ ಸಂಜೆ 07.00 ರಿಂದ 07.00ಗಂಟೆಗೆ ನನ್ನ ಮೋಟರ ಸೈಕಲ ಕಾಣೆಯಾದ ಬಗ್ಗೆ ಪೊಲೀಸ ಠಾಣೆಗೆ ಅರ್ಜಿ ಸಲ್ಲಿಸಿರುತ್ತೇನೆ. ಅದೇ ದಿನ ಸಾಯಂಕಾಲ ನನಗೆ ಪೊಲೀಸ ಠಾಣೆಯಿಂದ ಫೋನ್ ಬಂದ ನಂತರ ನನ್ನ ಮೋಟರ ಸೈಕಲಗೆ ಅಪಘಾತ ಆಗಿದೆ ಎಂದು ಗೊತ್ತಾಯಿತು.

4. ನಿಯಾಜ ಇವರು ನಮ್ಮ ಮನೆ ಕೂಲಿ ಕೆಲಸಕ್ಕೆ ಬಂದಾಗ ಅವರಿಗೆ ನಾನೇ ನನ್ನ ಮೋಟರ ಸೈಕಲನ್ನು ಕೊಟ್ಟು ಕಳುಹಿಸಿದ್ದೆ, ಈ ಅಪಘಾತ ಆಗಿದ್ದರಿಂದ ನಾನು ಈಗ ನನ್ನ ಮೋಟರ ಸೈಕಲ ಕಾಣೆಯಾಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಪೊಲೀಸ ಠಾಣೆಯಲ್ಲಿ ನನ್ನ ಮೋಟರ ಸೈಕಲ ಕಳ್ಳತನ ಆಗಿದೆ ಎಂದು ಸುಳ್ಳು ಅರ್ಜಿ ಕೊಟ್ಟಿದ್ದೆ ಎಂದರೆ ಸರಿಯಲ್ಲ.

5. 2-3 ದಿನಗಳ ನಂತರ ನಾನು ಕಾಗವಾಡ ಪೊಲೀಸ ಠಾಣೆಗೆ ಹೋಗಿ ನನ್ನ ಮೋಟರ ಸೈಕಲನ ಆರ್.ಸಿ. ಯನ್ನು ಕೊಟ್ಟಿರುತ್ತೇನೆ. ಪೊಲೀಸರಿಗೆ ನಾನು ಈ ಅಪಘಾತ ಹೇಗೆ ಆಗಿದೆ ಎಂದು ವಿಚಾರಿಸಿಲ್ಲ. ಮೃತ ನಿಯಾಜ ನನ್ನ ಬಳಿ ಕೂಲಿ ಕೆಲಸಕ್ಕೆ ಬಂದಾಗ ನಾನು ಅವರಿಗೆ ನೋಡಿದ್ದರಿಂದ ಅವರಿಗೆ 38ವರ್ಷಕ್ಕಿಂತ ಹೆಚ್ಚು ವಯಸ್ಸಾಗಿದೆ ಎಂದು ನನಗೆ ಕಂಡುಬಂದಿದ್ದರಿಂದ ಅವರಿಗೆ 38 ವರ್ಷಕ್ಕಿಂತ ಹೆಚ್ಚಿಗೆ ವಯಸ್ಸು ಇರುತ್ತದೆ ಎಂದು ಹೇಳಿರುತ್ತೇನೆ.

ನಿಯಾಜ ಇವರ ಶಾಲಾ ದಾಖಲೆಗಳ ಪ್ರಕಾರ ಅಪಘಾತ ಆದ ಸಮಯದಲ್ಲಿ ಅವರಿಗೆ 38 ವರ್ಷ ವಯಸ್ಸಾಗಿತ್ತು ಎಂದು ನನಗೆ ಗೊತ್ತಿಲ್ಲ. ಮೃತ ನಿಯಾಜ ಇವರಿಗೆ ಎಷ್ಟು ಆದಾಯ ಇತ್ತು ಎಂದು ನನಗೆ ಗೊತ್ತಿಲ್ಲ.

6. ಅಪಘಾತ ಆದ ಸ್ಥಳವನ್ನು ನಾನು ನೋಡಿಲ್ಲ. 1 ಮತ್ತು 2ನೇ ಎದುರುದಾರರು ಕೂಡಿಕೊಂಡು ಒಂದು ಸುಳ್ಳು ದೂರು ಕೊಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಸಲ್ಲಿಸಿದ ಅಂತಿಮ ವರದಿಯಲ್ಲಿ ನನ್ನನ್ನು 2ನೇ ಆರೋಪಿಯಾಗಿ ತೋರಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ಮೋಟರ ಸೈಕಲ ಕಾಣೆಯಾಗಿದೆ ಎಂದು ಮಿರಜ ಗ್ರಾಮೀಣ ಪೊಲೀಸ ಠಾಣೆಯಲ್ಲಿ ಕೊಟ್ಟ ಅರ್ಜಿಯನ್ನು ಕಾಗವಾಡ ಪೊಲೀಸರಿಗೆ ತೋರಿಸಿರುತ್ತೇನೆ.

7. ನಿಯಾಜ ಇವರು ನನ್ನ ಬಳಿ ಕೂಲಿ ಕೆಲಸ ಮಾಡಿಲ್ಲ ಆದರೆ ಕೂಲಿ ಕೆಲಸಕ್ಕೆ 09.00ಗಂಟೆಗೆ ಬಂದು 09.30ಗಂಟೆಗೆ ನನ್ನ ಮೋಟರ ಸೈಕಲ ತೆಗೆದುಕೊಂಡು ಹೋಗಿರುತ್ತಾರೆ. ನಿಯಾಜ ಇವರು ನನ್ನ ಬಳಿ ಕೂಲಿ ಕೆಲಸಕ್ಕೆ ಬಂದಾಗ ತುರ್ತು ಕೆಲಸ ಬಂದಾಗ ನಾನು ನಿಯಾಜ ಇವರಿಗೆ ನನ್ನ ಮೋಟರ ಸೈಕಲ ಕೊಟ್ಟು ಗೋಕಾಕಗೆ ಕಳುಹಿಸಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರ ಕೊಡುವ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ